# ಶ್ರೀರಾಮಕೃಷ್ಣ ಅವತಾರದ ವೈಶಿಷ್ಟ್ಯ

ಸ್ವಾಮಿ ಗೌತಮಾನಂದ

(ಹಿಂದಿನ ಸಂಚಿಕೆಯಿಂದ)

**ಹಿಂದಿನ ಸಂಚಿಕೆಯಲ್ಲಿ**

ಶ್ರೀರಾಮಕೃಷ್ಣರಲ್ಲಿ ಅನೇಕ ವೈಶಿಷ್ಟ್ಯಗಳನ್ನು ಕಾಣುತ್ತೇವೆ. ಎಲ್ಲ ಕ್ಷೇತ್ರಗಳಲ್ಲೂ ಪರಿಪೂರ್ಣತೆ ಇವರ ಹೆಗ್ಗಳಿಕೆ. ಆದರ್ಶಗಳ ಪಾಲನೆ ಮತ್ತು ಅವುಗಳನ್ನು ಅನುಷ್ಠಾನಕ್ಕೆ ತಂದು ಬೋಧಿಸುವ ಶಿಷ್ಯವೃಂದದ ಸೃಷ್ಟಿ – ಇವೆರಡು ಇವರ ಅವತಾರಕಾಲದ ಎರಡು ಮುಖ್ಯ ಕಾರ್ಯಗಳು. ಶ್ರೀರಾಮಕೃಷ್ಣರ ವಿಶಿಷ್ಟ ಅಂಶಗಳನ್ನು ಅವರೇ ನಿರೂಪಿಸುವ ಹಲವಾರು ಉದಾಹರಣೆಗಳನ್ನು 'ಶ್ರೀರಾಮಕೃಷ್ಣ ವಚನವೇದ' ದಲ್ಲಿ ನೋಡಬಹುದು.

[ವಚನವೇದದ ನಾಲ್ಕು ಉದಾಹರಣೆಗಳನ್ನು ಹಿಂದಿನ ಸಂಚಿಕೆಯಲ್ಲಿ ನೀಡಲಾಗಿದೆ. ಉಳಿದವುಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.]

೫. ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿ ಅರ್ಜುನನು ಶ್ರೀಕೃಷ್ಣನನ್ನು ಹೀಗೆ ಪ್ರಶಂಸಿಸುತ್ತಾನೆ:

**ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ**
**ಲೋಕತ್ರಯೇಽಪ್ಯಪ್ರತಿಮ ಪ್ರಭಾವ** (೧೧.೪೩)

"ನೀನು ಅಪ್ರತಿಮ ಪ್ರಭಾವವುಳ್ಳವನು. ಮೂರು ಲೋಕಗಳಲ್ಲಿಯೂ ನಿನ್ನ ಸಮಾನರಾದವರು ಯಾರೂ ಇಲ್ಲ. ಹಾಗಿದ್ದ ಮೇಲೆ ನಿನಗಿಂತ ದೊಡ್ಡವರು ಎಲ್ಲಿಂದ ತಾನೇ ಬಂದಾರು?"

೭.೯.೧೮೮೩ ರಂದು ನಡೆದ ಪ್ರಸಂಗವು 'ಶ್ರೀರಾಮಕೃಷ್ಣ ವಚನವೇದ' ದಲ್ಲಿ ಹೀಗೆ ದಾಖಲಾಗಿದೆ:

**ಶ್ರೀರಾಮಕೃಷ್ಣರು:** "ಒಳ್ಳೇದು, ನನ್ನ ಹಾಗೆ ಬೇರೆ ಯಾರಾದರೂ ಇದ್ದಾರೆಯೇ?

**ಮಾಸ್ಟರ್:** "ಇಲ್ಲ."

**ಶ್ರೀರಾಮಕೃಷ್ಣರು:** "ಬೇರೆ ಯಾರಾದರೂ ಪರಮಹಂಸರು?"

**ಮಾಸ್ಟರ್:** "ಇಲ್ಲ, ನಿಮ್ಮೊಡನೆ ಬೇರೆ ಯಾರನ್ನೂ ಹೋಲಿಸಲಾಗುವುದಿಲ್ಲ."

**ಶ್ರೀರಾಮಕೃಷ್ಣರು:** "ಆ ಹೆಸರಿನ ಒಂದು ಮರ ಇದೆ. ಆದರೆ ಅದನ್ನು ಯಾರೂ ಗುರುತಿಸಲಾರರು."

ಭಗವದ್ಗೀತೆಯಲ್ಲಿ ಕೂಡ ಇದೇ ತೆರನಾದ ಹೇಳಿಕೆಯನ್ನು ನಾವು ಕಾಣಬಹುದು. ಶ್ರೀಕೃಷ್ಣ ಹೀಗೆ ಹೇಳುತ್ತಾನೆ:

**ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ।**
**ಪರಂಭಾವಮಜಾನಂತಃ ಮಮಾವ್ಯಯಮನುತ್ತಮಮ್ ॥**

"ಮನುಷ್ಯಶರೀರವನ್ನು ಧರಿಸಿರುವ ನನ್ನ ಪರಮಭಾವವನ್ನು ತಿಳಿಯದಿರುವ ಮೂಢ ಜನರು, ಎಲ್ಲ ಜೀವಿಗಳ ಒಡೆಯನೂ, ಅವ್ಯಯನೂ, ಉತ್ತಮನೂ ಆದ ನನ್ನನ್ನು ತುಚ್ಛವಾಗಿ ತಿಳಿಯುತ್ತಾರೆ." (೯.೧೧)

೬. ಇತರ ಅವತಾರಗಳ ಚರಿತ್ರೆಗಳನ್ನು ನೋಡಿದಾಗ, ಭಕ್ತರು ಭಗವಂತನ ಬಳಿಸಾರುವುದನ್ನು ನಾವು ನೋಡುತ್ತೇವೆ. ಆದರೆ, ಶ್ರೀರಾಮಕೃಷ್ಣರ ವಿಷಯದಲ್ಲಿ ಇದು ತದ್ವಿರುದ್ಧ! ಭಗವತ್ಸ್ವರೂಪಿಯೇ ಭಕ್ತರನ್ನು ತನ್ನೆಡೆಗೆ ಸೆಳೆದುಕೊಂಡಿದ್ದಾನೆ.

೯.೮.೧೮೮೩ ರಂದು ನಡೆದ ಒಂದು ಪ್ರಸಂಗವನ್ನು ನೋಡೋಣ. ದಕ್ಷಿಣೇಶ್ವರದ ಅವರ ಕೊಠಡಿಯಲ್ಲಿ ಶ್ರೀರಾಮಕೃಷ್ಣರು ಭಾವಸ್ಥಿತಿಯಲ್ಲಿ, ಜಗನ್ಮಾತೆಯ ಸಂಗಡ ಮಾತನಾಡುತ್ತಿದ್ದಾರೆ: "ಅಮ್ಮಾ, ಏಕೆ ಹೀಗೆ ಗೊಂದಲ ಮಾಡುತ್ತಿರುವೆ? ನಾನು ಅಲ್ಲಿಗೆ ಹೋಗಲೇನು? ನೀನು ಕರೆದುಕೊಂಡು ಹೋದರೆ ಹೋಗುತ್ತೇನೆ." ಶ್ರೀರಾಮಕೃಷ್ಣರು ಒಬ್ಬ ಭಕ್ತನ ಮನೆಗೆ ಹೋಗುವುದಿತ್ತು. ಅದಕ್ಕೇ ಈ ಮಾತುಕತೆ!

ಮತ್ತೆ ಒಬ್ಬ ಭಕ್ತನ ಸಲುವಾಗಿ ಜಗನ್ಮಾತೆಗೆ ಹೀಗೆ ಹೇಳುತ್ತಾರೆ: "ಅಮ್ಮ, ಅವನನ್ನು ನಿಷ್ಕಲಂಕನನ್ನಾಗಿ ಮಾಡಿಬಿಡು. ಅದು ಸರಿ, ಅವನಿಗೆ ಒಂದು ಅಂಶವನ್ನು ಮಾತ್ರ ಏಕೆ ಕೊಟ್ಟೆ?... ಓ! ಈಗ ಅರ್ಥವಾಯಿತು. ಅದರಲ್ಲೇ ನಿನ್ನ ಕೆಲಸ ಆಗಿಹೋಗುತ್ತದೆ, ಎಂದೇನು?"

ಮೇಲಿನ ಸಂಭಾಷಣೆಗಳ ಮೂಲಕ ಶ್ರೀರಾಮಕೃಷ್ಣರು ಸೂಚಿಸುವುದೇನನ್ನು? ಅವತಾರಪುರುಷರು ಭಗವಂತನ ಅಭಿವ್ಯಕ್ತಿಯೇ ಆಗಿರುತ್ತಾರೆ. ಇದನ್ನು ಜನಸಾಮಾನ್ಯರಿಗೂ ಪರಮಹಂಸರು ಈ ರೀತಿಯಲ್ಲಿ ತೋರಿಸಿಕೊಡುತ್ತಿದ್ದಾರೆ.

೭. ಶ್ರೀರಾಮಕೃಷ್ಣರು ಆರು ತಿಂಗಳುಗಳ ಕಾಲ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿಹೋಗಿದ್ದರು. ಜಗನ್ಮಾತೆಯ ಆದೇಶದಂತೆ, ಅಲ್ಲಿಂದ ಕೆಳಗಿಳಿದು ಬಂದು, ಭಕ್ತಿ ಮತ್ತು ಭಕ್ತರನ್ನು ಅವಲಂಬಿಸಿ,

> ಭಗವಂತ ಮಾನವ ದೇಹಧಾರಣೆ ಮಾಡಿಕೊಂಡು ಅವತರಿಸುತ್ತಾನೆ. ಆತ ಎಲ್ಲಾ ಸ್ಥಳಗಳಲ್ಲಿಯೂ, ಎಲ್ಲಾ ಜೀವಿಗಳಲ್ಲಿಯೂ ಇರುವುದೇನೋ ನಿಜ. ಆದರೆ, ಆತ ಮಾನವ ದೇಹಧಾರಣೆ ಮಾಡಿಕೊಂಡು ಬಾರದಿದ್ದರೆ ಜೀವರ ಆಕಾಂಕ್ಷೆ ಪೂರ್ಣವಾಗದು; ಆವಶ್ಯಕತೆಗಳು ದೊರಕುವುದಿಲ್ಲ. ಇದು ಹೇಗೆ ಗೊತ್ತೆ? ಹಸುವಿನ ಯಾವ ಭಾಗ ಮುಟ್ಟಿದರೂ ಅದನ್ನು ಮುಟ್ಟಿದ ಹಾಗೇ ಆಗುತ್ತದೆ. ಆದರೆ ಹಾಲು ಬರುವುದು, ಅದರ ಕೆಚ್ಚಲಿನಿಂದ ಮಾತ್ರವೇ.
>
> –ಶ್ರೀರಾಮಕೃಷ್ಣ

ತಮ್ಮ ಉಳಿದ ಜೀವನವನ್ನು ಕಳೆದರು. ಈ ಕಾಲದಲ್ಲಿ ಅವರ ಮನಃಸ್ಥಿತಿ ಹೇಗಿತ್ತು? ೯.೯.೧೮೮೩ ರಂದು ಮಾತುಕತೆಯ ಮಧ್ಯೆ ಅವರು ಹೀಗೆ ಹೇಳುತ್ತಾರೆ: "ಜ್ಞಾನದ ನಂತರ 'ವಿಜ್ಞಾನ'. ಜೀವ–ಜಗತ್ತು ಎಲ್ಲಾ ಅವನೇ ಆಗಿದ್ದಾನೆ ಎಂದು ತಿಳಿಯುವುದೇ 'ವಿಜ್ಞಾನ'. ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ ಮುಂತಾದ ಭಾವಗಳಲ್ಲಿ ಪರಮಾತ್ಮನನ್ನು ಅನುಭವಿಸುವುದೇ 'ವಿಜ್ಞಾನ.' "

ಜ್ಞಾನಯೋಗದ ಪರಾಕಾಷ್ಠ ಸ್ಥಿತಿಯಾದ ಅದ್ವೈತಾನುಭೂತಿಯ ನಂತರವೂ, ಭಕ್ತನಾಗಿ ಬಾಳುವುದು ಸಾಧ್ಯ ಎಂಬುದನ್ನು ಈ ಮೂಲಕ ಪರಮಹಂಸರು ತೋರಿಸಿಕೊಡುತ್ತಾರೆ. ಇಂಥಹ 'ವಿಜ್ಞಾನಿ' ಯ ಸ್ಥಿತಿಯು ಕೇವಲ ಅವತಾರಪುರುಷರಿಗೆ ಮಾತ್ರವೇ ಸಾಧ್ಯ, ಅಲ್ಲವೇ?

೮. ೨೬.೯.೧೮೮೩ ರಂದು ದಕ್ಷಿಣೇಶ್ವರದಲ್ಲಿ ನಡೆಸಿದ ಸಂಭಾಷಣೆಯಲ್ಲಿ, ತಾವು ಪಡೆದುಕೊಂಡ ಬ್ರಹ್ಮಾನುಭವವನ್ನು ಕುರಿತು ಭಕ್ತರಿಗೆ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಇಲ್ಲಿ ಯಾರೂ ಬೇರೆಯವರು ಇಲ್ಲ. ನೀವೆಲ್ಲ ನಮ್ಮವರು. ನನ್ನ ಕಟ್ಟ ಕಡೆಯ ಅನುಭವ ಇದೇ: ಪರಮಾತ್ಮನು ಪೂರ್ಣನು, ನಾನು ಅವನ ಅಂಶನು. ಅವನು ಪ್ರಭು, ನಾನು ಅವನ ದಾಸ. ಮತ್ತೆ ಕೆಲವು ಬಾರಿ ಅಂದುಕೊಳ್ಳುತ್ತೇನೆ, "ಅವನೇ ನಾನು, ನಾನೇ ಅವನು!" ಹೀಗೆ ಪರಮಾತ್ಮ ಸ್ವರೂಪರೇ ತಾವು ಎಂದು ಶ್ರೀರಾಮಕೃಷ್ಣರು ಇಲ್ಲಿ ಸೂಚಿಸುತ್ತಿದ್ದಾರೆ.

೯. ೭.೩.೧೮೮೩ ರಂದು ನಡೆದ ಮಾತುಕತೆಯ ನಡುವೆ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ನೋಡಿ, ರಾಖಾಲನು, 'ನನ್ನ ಮಡದಿ ಹೇಗೆ ತಾನೇ ಬಾಳುತ್ತಾಳೆ?' ಎನ್ನುತ್ತಾನೆ. ನರೇಂದ್ರನನ್ನು ಸಮಾಧಿಯುಂಟಾಗಲೆಂದು ಸ್ಪರ್ಶಿಸಿದರೆ, ಅವನು, 'ಅಯ್ಯೋ, ನೀವೇನು ಮಾಡುತ್ತಿದ್ದೀರಿ? ನನಗೆ ತಂದೆತಾಯಿಯರಿದ್ದಾರೆ' ಎಂದು ಕೂಗಿಕೊಂಡನು."

ಮಾಯೆಯ ಹಿಡಿತದಿಂದ ತಪ್ಪಿಸಿಕೊಳ್ಳುವುದು ಎಷ್ಟು ಕಷ್ಟ ಎನ್ನುವುದನ್ನು ಪರಮಹಂಸರು ಈ ಉದಾಹರಣೆಗಳ ಮೂಲಕ ತಿಳಿಸುತ್ತಾರೆ. ಮುಂದುವರಿದು ಅವರು ಹೇಳುತ್ತಾರೆ, "ಅವತಾರಪುರುಷರ ಸ್ಪರ್ಶಮಾತ್ರದಿಂದಲೇ ಮಾಯೆ ಓಡಿಹೋಗುತ್ತದೆ. ಆದ್ದರಿಂದಲೇ ಚೈತನ್ಯ ದೇವರು ಸಂನ್ಯಾಸಿಯಾಗಿ, ಎಲ್ಲರಿಂದಲೂ ಪ್ರಣಾಮಗಳನ್ನು ಸ್ವೀಕರಿಸಿ, ಅವರೆಲ್ಲರನ್ನೂ ಉದ್ಧರಿಸಿದರು. ಜಗನ್ಮಾತೆ ನನ್ನನ್ನು ಕೂಡ ಇದೇ ಸ್ಥಿತಿಯಲ್ಲಿಟ್ಟಿದ್ದಾಳೆ."

ಅವತಾರಪುರುಷರನ್ನು ಅರಿತುಕೊಳ್ಳುವುದು ಬಹಳ ಕಷ್ಟ ಎಂದು ಹಿಂದೆಯೇ ನೋಡಿದ್ದೇವೆ. ಆದರೆ, ಅವರೇ ನಮ್ಮಂತಹ ಪಾಮರರ ಮೇಲೆ ಕೃಪೆ ಮಾಡಿ, ತಮ್ಮ ವಿಷಯವಾಗಿ ತಿಳಿಸಿಕೊಟ್ಟರೆ, ಅದು ನಮ್ಮ ಪರಮಭಾಗ್ಯವೇ ಸರಿ!

೧೦. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ:

ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನ ತದಸ್ತಿ ವಿನಾ ಯತ್ಸ್ಯಾತ್ ಮಯಾ ಭೂತಂ ಚರಾಚರಮ್ ॥

"ಹೇ ಅರ್ಜುನ, ಯಾವುದು ಎಲ್ಲ ಭೂತಗಳ ಉತ್ಪತ್ತಿಗೆ ಕಾರಣವಾಗಿರುವುದೋ, ಅದು ಕೂಡ ನಾನೇ ಆಗಿದ್ದೇನೆ; ಏಕೆಂದರೆ, ನನ್ನಿಂದ ರಹಿತವಾದಂತಹ ಯಾವುದೇ ಚರ ಮತ್ತು ಅಚರ ಪ್ರಾಣಿಗಳು ಇರುವುದಿಲ್ಲ." (೧೦.೩೯)

೧೩.೭.೧೮೮೫ ರಂದು ನಡೆದ ಮಾತುಕತೆಯನ್ನು ಶ್ರೀರಾಮಕೃಷ್ಣ ವಚನವೇದವು ಹೀಗೆ ವರ್ಣಿಸುತ್ತದೆ: ಶ್ರೀರಾಮಕೃಷ್ಣರು ತಮ್ಮ ಯುವ ಭಕ್ತ ದ್ವಿಜನನ್ನು ತೋರಿಸುತ್ತ ಹೀಗೆ ಹೇಳುತ್ತಾರೆ, " ದ್ವಿಜನು ನನ್ನನ್ನೇ ನೋಡುತ್ತಿರುತ್ತಾನೆ. ಇದೇನು ಕಡಿಮೆ ವಿಷಯವೇ? ಮನಸ್ಸೆಲ್ಲ ಒಂದಾಗಿ ನನ್ನಲ್ಲಿ ಸೇರಿಸಿದರೆ, ಎಲ್ಲವೂ ಸಿದ್ಧಿಸಿದಂತೆಯೇ ಸರಿ!... ನಾನು ಯಾರು? ಅವನೇ (ಪರಮಾತ್ಮ). ನಾನು ಯಂತ್ರ, ಅವನು ನಡೆಸುವವನು. ನನ್ನಲ್ಲಿ ಪರಮಾತ್ಮನೇ ಇದ್ದಾನೆ. ಅದಕ್ಕಾಗಿಯೇ ಜನರು ಹೆಚ್ಚು ಹೆಚ್ಚು ಆಕರ್ಷಿತರಾಗುತ್ತಾರೆ... ನಾನು ಸುಮ್ಮನೆ ಮುಟ್ಟಿದರೆ ಸಾಕು, ಎಲ್ಲ (ಅನುಭವಗಳೂ) ಸಿದ್ಧಿಸಿಬಿಡುತ್ತವೆ. ಇದು ಪರಮಾತ್ಮನ ಆಕರ್ಷಣೆಯೇ ಸರಿ."

೧೧. ಎಲ್ಲ ದೇವತೆಗಳಲ್ಲಿಯೂ ನಾನೇ ಇದ್ದೇನೆ ಎಂದು ಶ್ರೀಕೃಷ್ಣ ಹೇಳುತ್ತಾನೆ–**ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ** – ನಾನೇ ಎಲ್ಲ ಯಜ್ಞಗಳನ್ನೂ ಸ್ವೀಕರಿಸುವವನು, ಅವುಗಳಿಗೆ ನಾನೇ ಅಧಿಪತಿಯು. ಇದೇ ರೀತಿಯಲ್ಲಿಯೇ ಶ್ರೀರಾಮಕೃಷ್ಣರು ಎಲ್ಲ ಅವತಾರಪುರುಷರೂ ನಾನೇ ಆಗಿದ್ದೇನೆ ಎನ್ನುತ್ತಾರೆ. ೨೮.೭.೧೮೮೫ ರಂದು ಶ್ರೀರಾಮಕೃಷ್ಣರು ಮಾಸ್ಟರ್ ಮಹಾಶಯನ ಜೊತೆಗೆ, ಗಣುವಿನ ತಾಯಿ ಎನ್ನುವ ಭಕ್ತೆಯ ಮನೆಗೆ ಆಗತಾನೇ ಹೋಗಿಬಂದಿದ್ದಾರೆ. ಮಾಸ್ಟರ್ ಅವಳನ್ನು ಏಸುಕ್ರಿಸ್ತನ ಪರಮಭಕ್ತೆಯೊಬ್ಬಳಿಗೆ ಹೋಲಿಸುತ್ತಾನೆ. ಆಗ ಶ್ರೀರಾಮಕೃಷ್ಣರು ಹೇಳುತ್ತಾರೆ, "ಇದೆಲ್ಲ ನೋಡಿದರೆ ನಿನಗೆ ಏನನ್ನಿಸುತ್ತದೆ?" ಆಗ ಮಾಸ್ಟರ್ ಹೇಳುತ್ತಾನೆ, "ಶ್ರೀಕೃಷ್ಣ ಚೈತನ್ಯರೂ ಏಸುಕ್ರಿಸ್ತನೂ ಇಬ್ಬರೂ ಒಂದೇ" ಎಂದು. ತಕ್ಷಣ ಶ್ರೀರಾಮಕೃಷ್ಣರು ಹೇಳುತ್ತಾರೆ, "ಒಂದೇ, ಒಂದೇ! ಬೇರೇನು!

ಪರಮಾತ್ಮನು ಹೀಗೆ ನನ್ನ ಮೇಲೆ ಹತ್ತಿಕೊಂಡಿದ್ದಾನೆ. ನೀನೇ ನೋಡುತ್ತಿದ್ದೀಯಲ್ಲ?"

೧೨. ೧೫.೩.೧೮೮೬ ರಂದು ಶ್ರೀರಾಮಕೃಷ್ಣರು ಗಿರೀಶನಿಗೆ ಹೇಳುತ್ತಾರೆ: "ಪರಮಾತ್ಮನ ಹಲವಾರು ರೂಪಗಳನ್ನು ನೋಡುತ್ತಿದ್ದೇನೆ. ಅವುಗಳ ನಡುವೆ ಈ (ನನ್ನ) ರೂಪವನ್ನೂ ನೋಡುತ್ತಿದ್ದೇನೆ." ಅವರು ಮಾಸ್ಟರ್ ಮಹಾಶಯನಿಗೆ ಹೇಳುತ್ತಿದ್ದಾರೆ, "ಅದೋ, ಲಾಟು. ತಲೆ ಹಿಡಿದುಕೊಂಡು ಕುಳಿತಿದ್ದಾನೆ. ಪರಮಾತ್ಮನೇ ಹಾಗೆ ಕುಳಿತಿದ್ದಾನೆ!" ತಮ್ಮ ಹೃದಯವನ್ನು ಮುಟ್ಟಿ ನೋಡಿಕೊಂಡು ಮಾಸ್ಟರನಿಗೆ ಹೇಳುತ್ತಿದ್ದಾರೆ, "ಇದರೊಳಗಿಂದಲೇ ಪ್ರಪಂಚವೆಲ್ಲ ಬಂದಿದೆ ಎಂಬುದನ್ನು ನಾನು ನೋಡುತ್ತಿದ್ದೇನೆ."

೧೩. ೭.೩.೧೮೮೫ ರಂದು ಶ್ರೀರಾಮಕೃಷ್ಣರ ಪಾದಸೇವೆಯನ್ನು ಬಾಬುರಾಮ್ ಮುಂತಾದವರು ಮಾಡುತ್ತಿದ್ದಾರೆ. ಶ್ರೀರಾಮಕೃಷ್ಣರು ಹೇಳುತ್ತಿದ್ದಾರೆ: "ಈ ಸೇವೆಗೆ ದೊಡ್ಡ ಅರ್ಥವಿದೆ. ಇದರೊಳಗೆ (ತಮ್ಮಲ್ಲಿ) ಪರಮಾತ್ಮನೇ ಇದ್ದಾನೆ. ಆದ್ದರಿಂದಲೇ ಇವರುಗಳಲ್ಲಿರುವ ಎಲ್ಲ ಅಜ್ಞಾನ, ಅವಿದ್ಯೆಗಳು ಸಂಪೂರ್ಣವಾಗಿ ತೊಲಗಿಹೋಗುತ್ತವೆ."

ಶ್ರೀರಾಮಕೃಷ್ಣರು ಭಕ್ತರಿಗೆ ಹೇಳುತ್ತಾರೆ: "ಅಂದು ನಾನು ನೋಡಿದೆ, ನನ್ನೊಳಗಿಂದ ಸಚ್ಚಿದಾನಂದವು ಹೊರಬಂದು, ರೂಪ ಧರಿಸಿ ಹೇಳಿತು, 'ನಾನೇ ಪ್ರತಿಯುಗದಲ್ಲಿಯೂ ಅವತರಿಸುತ್ತೇನೆ. ನೋಡಿದೆ, (ಇದು) ಪೂರ್ಣ ಅವತಾರ, ಪೂರ್ಣ ಸತ್ವಗುಣದ ಐಶ್ವರ್ಯ.' "

೧೪. ಶ್ರೀರಾಮಕೃಷ್ಣರು, ಎಲ್ಲರೂ ಪಡೆಯಲು ಹಾತೊರೆಯುವ ಬ್ರಹ್ಮಜ್ಞಾನವನ್ನೂ ಬೇಡವೆನ್ನುತ್ತಾರೆ. ೩೧.೧೨.೧೮೮೩ ರಂದು ಅವರು ತಾಯಿ ಕಾಳಿಯೊಡನೆ ಮಾತನಾಡುತ್ತ ಹೇಳುತ್ತಾರೆ, "ಓ ತಾಯಿ! ಬ್ರಹ್ಮಜ್ಞಾನವನ್ನು ಕೊಟ್ಟು ನನ್ನನ್ನು ಅಚೈತನ್ಯನನ್ನಾಗಿಸಬೇಡ. ನನಗೆ ಬ್ರಹ್ಮಜ್ಞಾನ ಬೇಡ, ಅಮ್ಮಾ! ನಾನು ಭಕ್ತರ ಕೂಡ ಆನಂದಿಸುವೆನು, ಕ್ರೀಡಿಸುವೆನು." ಈ ಬಗೆಯ ಪ್ರಾರ್ಥನೆಯನ್ನು ಕೇವಲ ಅವತಾರಪುರುಷರು ಮಾತ್ರ ಮಾಡಲು ಸಾಧ್ಯ, ಅಲ್ಲವೇ?

೧೫. ಸಾಮಾನ್ಯ ಸಾಧಕರು, ಸಂತರು, ಸಿದ್ಧರು ಮಾಡುವ ಜಪ, ಧ್ಯಾನ ಇವೆಲ್ಲವೂ ಅತಿಸಾಮಾನ್ಯವೆನ್ನುತ್ತಾರೆ, ಈ ಅವತಾರ ಪುರುಷರು. ೨೯.೯.೧೮೮೪ ರಂದು ನಡೆದ ಘಟನೆಯನ್ನೇ ತೆಗೆದುಕೊಳ್ಳಿ. ದಕ್ಷಿಣೇಶ್ವರದ ತಮ್ಮ ಕೊಠಡಿಯಲ್ಲಿ ಶ್ರೀರಾಮಕೃಷ್ಣರು ಹಾಜರಾನೊಡನೆ ಮಾತನಾಡುತ್ತಿದ್ದಾರೆ. ಅವರು ಹಾಜರಾನ ಜಪಮಾಲೆಯನ್ನು ಕೈಗೆತ್ತಿಕೊಂಡು ಹೀಗೆ ಹೇಳುತ್ತಾರೆ: "ನನ್ನಿಂದ ಜಪ ಆಗುವುದಿಲ್ಲ. ಇಲ್ಲ, ಇಲ್ಲಿ ಮಾಡಬಲ್ಲೆ, ಎಡಗೈಯಿಂದ ಮಾಡಬಲ್ಲೆ. ಆ ಕಡೆಯಿಂದ(ಬಲಗೈ) ಆಗದು!" ನಂತರ ಶ್ರೀರಾಮಕೃಷ್ಣರು ಜಪಮಾಡಲು ಪ್ರಯತ್ನಿಸಿದರು.

**ಅವತಾರಪುರುಷ ಅವತರಿಸಿ ಬಂದಾಗ ಅದು ಸಾಮಾನ್ಯ ಜನರಿಗೆ ಗೊತ್ತಾಗುವುದಿಲ್ಲ; ರಹಸ್ಯವಾಗಿ ಬರುತ್ತಾನೆ. ಎಲ್ಲೋ ಒಂದು ಐದಾರು ಮಂದಿ ಅಂತರಂಗ ಭಕ್ತರು ಮಾತ್ರ ಆತನನ್ನು ಗುರುತಿಸಬಲ್ಲರು.**

**– ಶ್ರೀರಾಮಕೃಷ್ಣ**

ಆದರೆ ಜಪವನ್ನು ಆರಂಭಿಸಿದೊಡನೆ, ಸಮಾಧಿಯಲ್ಲಿ ಮುಳುಗಿ ಹೋದರು! ಹಾಗೆಯೇ ಬಹಳ ಹೊತ್ತಿನವರೆಗೆ ಇದ್ದಾರೆ. ಅವರ ಕೈಯಲ್ಲಿ ಜಪಮಾಲೆ ಹಾಗೆಯೇ ಇದೆ. ಇದನ್ನು ಭಕ್ತರು ಅವಾಕ್ಕಾಗಿ ನೋಡುತ್ತಿದ್ದಾರೆ."

ಮೇಲಿನ ಘಟನೆಯನ್ನು ನೆನಪಿಸಿಕೊಳ್ಳುತ್ತ, ೧.೧೦. ೧೮೮೪ ರಂದು ಶ್ರೀರಾಮಕೃಷ್ಣರು ಭಾವತನ್ಮಯರಾಗಿ ಹೇಳುತ್ತಾರೆ, "ನಾನು ಮಾಲೆಯನ್ನು ಎಣಿಸುವುದೇ? ಛೀ! ಛೀ! ಈ (ನಾನು ಎಂಬ) ಶಿವಲಿಂಗವು ಪಾತಾಳದಿಂದ ಎದ್ದದ್ದು, ಸ್ವಯಂಭು ಲಿಂಗ."

ಇದಾದ ಮಾರನೆಯ ದಿನ ಅವರು ಹಾಜರಾನಿಗೆ ಹೇಳುತ್ತಾರೆ: "ನೀನು ಆ ದಿನ ಜಪ ಮಾಡುತ್ತಿದ್ದೆ. ನಾನು ತಾಯಿ ಕಾಳಿಗೆ ಹೇಳಿದೆ, 'ತಾಯಿ, ಇವನು ಎಂಥ ನಿಕೃಷ್ಟ ಬುದ್ಧಿಯವನು. ಇಲ್ಲಿ(ನನ್ನಲ್ಲಿ) ಬಂದಿದ್ದರೂ ಕೂಡ, ಜಪ ಮಾಡುತ್ತಾನಲ್ಲ! ಇಲ್ಲಿ ಬಂದವರಿಗೆಲ್ಲ ತಕ್ಷಣವೇ ಆತ್ಮದರ್ಶನವಾಗಿ ಬಿಡುತ್ತೆ. ಅವರಿಗೆ ಮತ್ತೆ ಮಾಲೆಯಿಂದ ಮಾಡುವ ಜಪ ಬೇಕಾಗೋಲ್ಲ." ಆಧ್ಯಾತ್ಮಿಕ ಸಾಧನಾರಂಗದಲ್ಲಿ ಎಂಥ ಅದ್ವಿತೀಯ ಮಲ್ಲರು ಶ್ರೀರಾಮಕೃಷ್ಣರು!

೧೬. ಕೊನೆಯದಾಗಿ, ಶ್ರೀರಾಮಕೃಷ್ಣರು ಜನಸಾಮಾನ್ಯರಿಗೆ ಆಧ್ಯಾತ್ಮಿಕ ಉನ್ನತಿ ಮತ್ತು ವಿಜಯಕ್ಕಾಗಿ ನೀಡಿದ ಸಂದೇಶವನ್ನು ಕುರಿತು ತಿಳಿದುಕೊಳ್ಳೋಣ. ೨೫.೨.೧೮೮೫ ರಂದು ಶ್ರೀರಾಮಕೃಷ್ಣರು ಗಿರೀಶನ ನಾಟಕಶಾಲೆಯಲ್ಲಿ, ಅವನಿಗೆ ಹೀಗೆ ಹೇಳುತ್ತಾರೆ: "ಯಾರು ನನಗೆ ಮುಕ್ತಿ ಆಗುವುದೇ ಇಲ್ಲ, ಆಗದು ಎಂದು ಹೇಳುತ್ತಿರುತ್ತಾರೋ, ಅವರಿಗೆ ಮುಕ್ತಿ ಆಗುವುದೇ ಇಲ್ಲ. ಯಾರು ದೃಢವಾಗಿ, "ನಾನು ಮುಕ್ತನು, ನಾನು ಮುಕ್ತನು ಎನ್ನುತ್ತಾನೋ, ಅವನು ಮುಕ್ತನೇ ಆಗುತ್ತಾನೆ."

ಶ್ರೀರಾಮಕೃಷ್ಣರ ವಾಣಿಗಳ ಮೂಲಕವೇ ಅವರ ಜೀವನದ ವೈಶಿಷ್ಟ್ಯಗಳನ್ನು ಕೇಳಿ ತಿಳಿದೆವು. ಬನ್ನಿ, ಈ ಅದ್ವಿತೀಯ, ಅನುಪಮ ಅವತಾರಪುರುಷರು ತೋರಿಸಿಕೊಟ್ಟ ಸರಳ ಮಾರ್ಗವನ್ನು ಅವಲಂಬಿಸಿ, ನಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳೋಣ.